ಕಂದಾಯ ಇಲಾಖೆ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ.

**ನಂ.ಗ್ರಾಲೆ : ಸಿಬ್ಬಂದಿ : ಸಿಆರ್ : 73 : 2019-20,** **ದಿನಾಂಕ : 30.05.2020**

## ಅಧಿಸೂಚನೆ

**ವಿಷಯ :** ದಾವಣಗೆರೆ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತಂತೆ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:**
1) ಸರ್ಕಾರದ ಅಧಿಸೂಚನೆ ಸಂ. ಆರ್ ಡಿ 299 ಬಿಎಸ್ ಸಿ 2006, ದಿನಾಂಕ : 3.2.2009
2) ಸರ್ಕಾರದ ಅಧಿಸೂಚನೆ ಸಂ. ಆರ್ ಡಿ 299 ಬಿಎಸ್ ಸಿ 2006, ದಿನಾಂಕ : 24.7.2009
3) ಸರ್ಕಾರದ ಪತ್ರ ಸಂ.ಕಂಇ 04 ಬಿಎಸ್ ಸಿ 2011, ದಿನಾಂಕ : 25.2.2011
4) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ.100.ಬಿಎಸ್.ಸಿ.2011 ದಿನಾಂಕ: 29.06.2012
5) ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ:27.01.2020

*****

ಸರ್ಕಾರದ ಉಲ್ಲೇಖ (1) ರಿಂದ (4) ರವರೆಗಿನ ಅಧಿಸೂಚನೆ/ಸುತ್ತೋಲೆ/ಪತ್ರ ದಂತೆ ದಾವಣಗೆರ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ ಈ ಕಛೇರಿಯ ಉಲ್ಲೇಖ (5)ರ ಅಧಿಸೂಚನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಅಹ್ವಾನಿಸಲಾಗಿರುತ್ತದೆ, ಅದರಂತೆ ಒಟ್ಟು 8955 ಅರ್ಜಿಗಳು ಸ್ವೀಕೃತಿಯಾಗಿದ್ದು, ಸದರಿ ಅರ್ಜಿಗಳಲ್ಲಿ ಅರ್ಜಿ ಶುಲ್ಕ ಪಾವತಿಸಿದ 5190 ಅರ್ಜಿಗಳನ್ನು ಅಂಗೀಕರಿಸಿದ್ದು, ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಶುಲ್ಕ ಪಾವತಿಸದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಉಲ್ಲೇಖ (5)ರ ಅಧಿಸೂಚನೆಯಂತೆ ನಿಗದಿತ ಅವಧಿಯೊಳಗೆ ಅರ್ಜಿ ಶುಲ್ಕದೊಂದಿಗೆ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಮೆರಿಟ್ ಹಾಗೂ ವರ್ಗವಾರು ಮತ್ತು ರೋಸ್ಟರ್ ಮೀಸಲಾತಿ ಆಧಾರದಲ್ಲಿ 1:10 ರ ಅನುಪಾತದಲ್ಲಿ ಖಾಲಿ ಇರುವ 18 ಗ್ರಾಮಲೆಕ್ಕಿಗರ ಹುದ್ದೆಗಳಿಗೆ 180 ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿದೆ.

ಈ ಪಟ್ಟಿಯು ತಾತ್ಕಾಲಿಕ ಪರಿಶೀಲನಾ ಪಟ್ಟಿಯೇ ಹೊರತು ಆಯ್ಕೆ ಪಟ್ಟಿಯಾಗಿರುವುದಿಲ್ಲ. ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಸದರಿ ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವುದು.

ತಾತ್ಕಾಲಿಕ ಪರಿಶೀಲನಾ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ:15-06-2020 ರ ಸಂಜೆ 5.30 ರೊಳಗಾಗಿ ಈ ಕಛೇರಿಗೆ ಖುದ್ದು ಹಾಜರಾಗಿ ನಿಖರವಾದ ಆಕ್ಷೇಪಣೆಯನ್ನು ಸಂಬಂಧಿಸಿದ ಮೂಲ ದಾಖಲಾತಿ ಮತ್ತು ಒಂದು ಸೆಟ್ ದೃಢೀಕೃತ ಪ್ರತಿಯೊಂದಿಗೆ ಈ ಕಛೇರಿಯ ಎಡಿಎಂ ಶಿರಸ್ತೇದಾರ್ (ಕೊಠಡಿ ಸಂ.3) ಸಮ್ಮುಖದಲ್ಲಿ ಸಲ್ಲಿಸಲು ತಿಳಿಸಿದೆ. ನಿಗದಿತ ಅವಧಿಯ ನಂತರ ಬಂದ ಆಕ್ಷೇಪಣೆಗಳನ್ನು ಮತ್ತು ಅನ್ಯ ಮಾರ್ಗಗಳ ಮೂಲಕ ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಅಧಿಸೂಚನೆಯಲ್ಲಿ ಸೂಚಿಸಿದಂತೆ, ಎಲ್ಲಾ ಮೂಲ ದಾಖಲೆಗಳೊಂದಿಗೆ ಈ ಕೆಳಕಂಡ ದಿನಾಂಕದಂದು ಖುದ್ದು ಹಾಜರಾಗತಕ್ಕದ್ದು. ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳ ಹೆಸರನ್ನು ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವುದು.

| ಕ್ರ.ಸಂ | ವಿವರ | ಮೂಲ ದಾಖಲೆ |
|---|---|---|
| 1. | ಅರ್ಜಿ ಶುಲ್ಕ ಪಾವತಿ ಬಗ್ಗೆ | ಅಂಚೆ ಕಛೇರಿಯ ಚಲನ್ ಮೂಲ ಪ್ರತಿ |
| 2. | ಜನ್ಮ ದಿನಾಂಕದ ಬಗ್ಗೆ | ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ |
| 3. | ವಿದ್ಯಾರ್ಹತೆ ಮತ್ತು ಪಡೆದ ಅಂಕ | ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಮೂಲ ಅಂಕ ಪಟ್ಟಿ. |
| 4. | ಗ್ರಾಮೀಣ ಅಭ್ಯರ್ಥಿ/ಮಾಜಿ ಸೈನಿಕ/ಕನ್ನಡ ಮಾಧ್ಯಮ/ಯೋಜನಾ ನಿರಾಶ್ರಿತ ಮೀಸಲಾತಿ ಕೋರುವ ಅಭ್ಯರ್ಥಿಗಳು | ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ |
| 5. | ಮೀಸಲಾತಿಯನ್ವಯ ಪರಿಶೀಲನಾ ಪಟ್ಟಿಯಲ್ಲಿ ಹೆಸರು ಇರುವ ಅಭ್ಯರ್ಥಿಗಳು<br>ಪ.ಜಾ/ಪ.ಪಂ/ಪ್ರವರ್ಗ-1/2(ಎ)/2(ಬಿ)/ 3(ಎ)/ 3(ಬಿ) | ಸಂಬಂಧ ಪಟ್ಟ ತಹಶೀಲ್ದಾರ್ ರವರಿಂದ ಪಡೆದ ಮೂಲ ಜಾತಿ ಪ್ರಮಾಣ ಪತ್ರ |
| 6. | ಅಂಗವಿಕಲ ಮೀಸಲಾತಿ ಕೋರುವ ಅಭ್ಯರ್ಥಿಗಳು | ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರ |
| 7. | ಕಂಪ್ಯೂಟರ್ ಜ್ಞಾನ (ಬೇಸಿಕ್) ಹೊಂದಿರುವ ಬಗ್ಗೆ | ದಾಖಲೆ ಹಾಗೂ ಪ್ರಮಾಣ ಪತ್ರಗಳು |
| 8. | ಇನ್ನಿತರೆ ಮೀಸಲಾತಿ ಕೋರುವ ಅಭ್ಯರ್ಥಿಗಳು | ಅಧಿಸೂಚನೆಯಲ್ಲಿ ಸೂಚಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ದಾಖಲೆಗಳು. |

**ಪರಿಶೀಲನೆಗೆ ಹಾಜರಾಗಬೇಕಾದ ಅಭ್ಯರ್ಥಿಗಳು ಮತ್ತು ದಿನಾಂಕ ಮತ್ತು ಸ್ಥಳ**

| ಕ್ರ.ಸಂ | ಅಭ್ಯರ್ಥಿಗಳು | ದಿನಾಂಕ | ಸಮಯ | ಸ್ಥಳ |
|---|---|---|---|---|
| 1. | ಸಾಮಾನ್ಯ ಅಭ್ಯರ್ಥಿ ಮೀಸಲಾತಿಯಡಿ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು | 24.06-2020 | ಬೆಳಿಗ್ಗೆ 10.30 | ತುಂಗಭದ್ರಾ ಸಭಾಂಗಣ ಜಿಲ್ಲಾಧಿಕಾರಿಗಳ ಕಛೇರಿ ದಾವಣಗೆರೆ |

| | | | | |
|---|---|---|---|---|
| 2. | ಪರಿಶಿಷ್ಟ ಜಾತಿ / ಪ್ರವರ್ಗ 2ಎ/ ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿ ರ ಮೀಸಲಾತಿಯಡಿ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು | 26.06-2020 | ಬೆಳಿಗ್ಗೆ 10.30 | ತುಂಗಭದ್ರಾ ಸಭಾಂಗಣ ಜಿಲ್ಲಾಧಿಕಾರಿಗಳ ಕಛೇರಿ ದಾವಣಗೆರೆ |

ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಈ ಕಛೇರಿಯ ವೆಬ್ ಸೈಟ್ http://davanagere.nic.in ಮತ್ತು http://davanagere-va.kar.nic.in ರಲ್ಲಿ ಪರಿಶೀಲಿಸಬಹುದು.

(ಶಿವಾನಂದ ಎಂ. ಕುಂಬಾರ)
ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ದಾವಣಗೆರೆ

(ಪೂಜಾರ ವೀರಮಲ್ಲಪ್ಪ,ಕ.ಆ.ಸೇ)
ಅಪರ ಜಿಲ್ಲಾಧಿಕಾರಿ,
ದಾವಣಗೆರೆ ಜಿಲ್ಲೆ

(ಮಹಾಂತೇಶ ಬೀಳಗಿ, ಭಾ.ಆ.ಸೇ)
ಜಿಲ್ಲಾಧಿಕಾರಿ,
ದಾವಣಗೆರೆ ಜಿಲ್ಲೆ

ಪ್ರತಿಯನ್ನು:-

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅವಗಾಹನೆಗೆ ಸಲ್ಲಿಸಿದೆ.
2. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ,ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
4. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಜಿಲ್ಲಾ ವ್ಯಾಪ್ತಿಯ ಎಲ್ಲಾ ತಾಲ್ಲೂಕು ತಹಶೀಲ್ದಾರರವರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
5. ಡೆಪ್ಯೂಟಿ ಡೈರೆಕ್ಟರ್ ಜನರಲ್, ರಾಷ್ಟ್ರೀಯ ವಿಜ್ಞಾನ ಸೂಚನಾ ಕೇಂದ್ರ, ವಿ.ವಿ. ಟವರ್, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ರಾಷ್ಟ್ರೀಯ ವಿಜ್ಞಾನ ಸೂಚನಾಧಿಕಾರಿ, ರಾಷ್ಟ್ರೀಯ ವಿಜ್ಞಾನ ಸೂಚನಾ ಕೇಂದ್ರ ದಾವಣಗೆರೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ದಾವಣಗೆರೆ ಜಿಲ್ಲೆ
8. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗ ಅಭಿವೃದ್ಧಿ ಇಲಾಖೆ, ದಾವಣಗೆರೆ ಜಿಲ್ಲೆ
9. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ
10. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದಾವಣಗೆರೆ ಜಿಲ್ಲೆ
11. ಉಪವಿಭಾಗಾಧಿಕಾರಿಗಳು, ದಾವಣಗೆರೆ ಉಪವಿಭಾಗ ಇವರಿಗೆ ಕಛೇರಿಯ ಸೂಚನಾ ಫಲಕದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಕುರಿತು ಸೂಕ್ತ ಕ್ರಮವಹಿಸಲು ಸೂಚಿಸಿದೆ.
12. ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ರು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿ ವ್ಯಾಪಕವಾಗಿ ಪ್ರಚಾರ ಮಾಡುವ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.
13. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಸಾರ ಇಲಾಖೆ, ದಾವಣಗೆರೆ ಇವರಿಗೆ ಕಳುಹಿಸುತ್ತಾ, ಮೇಲ್ಕಂಡ ಅಧಿಸೂಚನೆಯ ಅಂಶಗಳನ್ನು ವೆಚ್ಚ ರಹಿತವಾಗಿ ರಾಜ್ಯ ಮಟ್ಟದ ಹಾಗೂ ಸ್ಥಳೀಯ ಮಟ್ಟದ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.
14. ಈ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವ ಕುರಿತು.